ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿತು. ದಿಃ **09-08-2016**

ಪಾಟೀಸವಾಲುಃಎಸ್‌ಜಿ ವಕೀಲರಿಂದ

ನನಗೆ ದಾವಾ ಸ್ವತ್ತಿನ ಬಗ್ಗೆ ಮತ್ತು ಪ್ರತಿವಾದಿಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಇದೆಯೇ ಎಂದರೆ ಇರುತ್ತದೆ. ಬಸವೇಗೌಡರಿಗೆ 5 ಜನ ಮಕ್ಕಳು. ಅವರು ಮತ್ತೀಮಾದೇಗೌಡ, ಬಸವರಾಜು, ಪುಟ್ಟಸ್ವಾಮಿ, ನಂಜುಂಡ ಮತ್ತು ತಮ್ಮಯ್ಯ. ಚಿಕ್ಕಮ್ಮ ಹೆಣ್ಣು ಮಗಳು. ಬಸವೇಗೌಡನ ತಂದೆ ಬಸವೇಗೌಡನಿಗೆ ಎಷ್ಟು ಜನ ಮಕ್ಕಳು ಎಂದರೆ ಯಾವ ಬಸವೇಗೌಡ. ಅದು ಗೊತ್ತಿಲ್ಲ. ನೀವು ಪ್ರತಿವಾದಿಗಳ ಬಗ್ಗೆ ಎಲ್ಲಾ ಗೊತ್ತು ಎಂದಿದ್ದರಿಂದ ಉತ್ತರ ಹೇಳಿ ಎಂದರೆ ಸಾಕ್ಷಿಯು ಬಸವೇಗೌಡ ಎನ್ನುವವನು ಒಬ್ಬನೇ ಇರುತ್ತಾನೆ ಎನ್ನುತ್ತಾರೆ. ಈ ದಾವೆಗೆ ನಾನು ಬಸವೇಗೌಡನ ಎಲ್ಲಾ ವಂಶಸ್ಥರನ್ನು ಪಕ್ಷಕಾರರನ್ನಾಗಿ ಮಾಡಿದ್ದೀನಾ ಎಂದರೆ ಮಾಡಿದ್ದೇನೆ. ಬಸವೇಗೌಡ ವಾರಸುದಾರರ ಹೆಸರುಗಳನ್ನು ಹೇಳಿ ದಾವೆಗೆ ಸೇರ್ಪಡೆ ಮಾಡಿದವರು ನನ್ನ ತಂದೆ. ನನ್ನ ತಂದೆ ಈ ದಾವೆಯಲ್ಲಿ ಹಾಜರುಮಾಡಿದ ಎಲ್ಲಾ ದಾಖಲೆಗಳ ಬಗ್ಗೆ ನಾನು ಸಂಪೂರ್ಣವಾಗಿ ತಿಳಿದುಕೊಂಡಿದ್ದೀನಾ ಎಂದರೆ ತಿಳಿದುಕೊಂಡಿದ್ದೇನೆ. ನಾವು ಬಸವೇಗೌಡನ ಮಗ ನಂಜೇಗೌಡನನ್ನು ಪ್ರತಿವಾದಿಯನ್ನಾಗಿ ಮಾಡಿಲ್ಲವೆಂದರೆ ಅವನಿಗೆ ಸಂಬಂಧಪಟ್ಟಿಲ್ಲವಾದ್ದರಿಂದ ಆತನನ್ನು ಪ್ರತಿವಾದಿಯಾಗಿ ಮಾಡಿಲ್ಲ, ನನಗೆ ಎಲ್ಲಾ ಪ್ರತಿವಾದಿಗಳ ಬಗ್ಗೆ ಪೂರ್ಣವಾಗಿ ಮಾಹಿತಿ ಇಲ್ಲವೆಂದರೆ ಅವರು ಇಷ್ಟು ಜನ ಇದ್ದಾರೆಂದು ಗೊತ್ತಿದೆ. ನಾವು ಬಸವೇಗೌಡರ ಮಕ್ಕಳ ವಾರಸುದಾರರನ್ನು ದಾವೆಗೆ ಸೇರಿಸಿಲ್ಲವೆಂದರೆ ಉತ್ತರಿಸಿಲ್ಲ.

ದಾವಾ ಸ್ವತ್ತು ಪೋಡಿಯಾಗುವ ಮುಂಚೆ ಎಷ್ಟು ವಿಸ್ತೀರ್ಣದಲ್ಲಿತ್ತೆಂದು ನನಗೆ ಗೊತ್ತಿಲ್ಲ. ಪೋಡಿಯಾದ ನಂತರ ಎಷ್ಟು ಇದೆ ಎಂಬುದು ಮಾತ್ರ ಗೊತ್ತು. ದಾವಾ ಎ ಸ್ವತ್ತಿನ ಪೂರ್ವಕ್ಕೆ ಚೆನ್ನಂಬಳ್ಳಿ ಬಸವೇಗೌಡರ ಜಮೀನು, ಪಶ್ಚಿಮಕ್ಕೆ ನಮ್ಮದೇ ಆಸ್ತಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಮಲ್ಲೇಗೌಡರ ಜಮೀನು ಇರುತ್ತವೆ. ದಾವೆಯಲ್ಲಿ ನಾನು ಹೇಳುತ್ತಿರುವ ಚೆಕ್ಕುಬಂದಿಯನ್ನೇ ಬರೆಯಿಸಿದ್ದೇವೆಯೇ ಎಂದರೆ ಹೌದು. ನಾನು ಈಗ ಒಂದು ಎಕರೆ 25 ಗುಂಟೆಯಲ್ಲಿ ಸ್ವಾಧೀನ ಹೊಂದಿದ್ದೇನೆ. ನಾನು ಸ್ವಾಧೀನ ಹೊಂದಿರುವ ಒಂದು ಎಕರೆ 25 ಗುಂಟೆಯ ಉತ್ತರಕ್ಕೆ ಗ್ರಾಮಠಾಣಾ ಜಾಗವಿದೆ ಎಂದರೆ ಇಲ್ಲಾ ಅದು ರಸ್ತೆ ಇರುತ್ತದೆ. ನಾನು ಸ್ವಾಧೀನವಿರುವ ಜಮೀನಿನ ಯಾವ ದಿಕ್ಕಿನಲ್ಲಿ ಗ್ರಾಮಠಾಣಾ ನಿವೇಶನಗಳಿವೆ ಎಂದರೆ ಉತ್ತರಕ್ಕೆ ರಸ್ತೆಯ ಆಚೆ ಕಡೆ ಗ್ರಾಮಠಾಣಾ ಸೈಟುಗಳಿವೆ.

ದಾವಾ ಎ ಸ್ವತ್ತು ಸರ್ವೆ ನಂಃ 622ಃ4ಎ ಗೆ ವಾದ ಪತ್ರದಲ್ಲಿ ನಮೂದಿಸಿರುವ ಚೆಕ್ಕು ಬಂದಿಯನ್ನು ಓದಿ ಹೇಳಿ ಈ ಜಮೀನು ಯಾರಿಗೆ ಸೇರಿದ್ದು ಎಂದರೆ ಮಲ್ಲೇಗೌಡನಿಗೆ ಸೇರಿದೆ. ನಿಪಿಃ 6 ರ ಸರ್ವೆ ನಕ್ಷೆಯಲ್ಲಿ ಸರ್ವೆ ನಂಬರ್ 622ಃ2ಬಿ ಯಾರಿಗೆ ಸೇರಿದ್ದು ಎಂದು ಕೇಳಿದರೆ ನನಗೆ ಬಿ ಇತ್ಯಾದಿ ಗೊತ್ತಿಲ್ಲ ಆದರೆ 2 ಗುಂಟೆ ನಿಂಗಯ್ಯನಿಗೆ ಸೇರಿದೆ. ಸದರಿ ಆಸ್ತಿ ಬಸವೇಗೌಡರಿಗೆ ಸೇರಿದ್ದರೂ ನಿಂಗಯ್ಯನದೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಜಮೀನನ್ನು ಒತ್ತುವರಿ ಮಾಡಬೇಕಾದರೆ ನಮ್ಮ ಜಮೀನಿನ ಪಕ್ಕದಲ್ಲಿ ಪ್ರತಿವಾದಿಗಳಿಗೆ ಜಮೀನು ಅಥವಾ ಆಸ್ತಿ ಇರಲೇಬೇಕು ಎಂದರೆ ಸರಿ.

ನನ್ನ ತಂದೆ 15 ವರ್ಷಗಳ ಹಿಂದೆ ಜಮೀನಿನ ಖರೀದಿ ಮಾಡಿರಬಹುದು. 1980 ನೇ ಸಾಲಿಗಿಂತ ಮುಂಚೆಯೇ ಸರ್ವೆ ನಂಬರ್ 622ಃ4ಎ ನ ಉತ್ತರ ದಿಕ್ಕಿನಲ್ಲಿ ಗ್ರಾಮಠಾಣಾ ನಿವೇಶನ ರಚಿಸಿರುವ ಬಗ್ಗೆ ಅಸೆಸ್‌ಮೆಂಟ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಅಸೆಸ್‌ಮೆಂಟ್ ಸರಿಪಡಿಸಿ ಕೊಡಿ ಎಂದು ಗ್ರಾಮಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೆವು ಎಂದರೆ ನಾನು ಅರ್ಜಿ ಕೊಟ್ಟಿರಲಿಲ್ಲ ಸರ್ವೆ ನಂಬರ್ ಇರುವ ಜಾಗದಲ್ಲಿ ಅಸೆಸ್‌ಮೆಂಟ್ ನಂಬರ್ ಹೇಗೆ ಬರುತ್ತದೆ ಸಾರ್ ಎಂದು ಪ್ರಶ್ನಿಸಿದ್ದೆ. ನಾವು ಬಸವೇಗೌಡರಿಗೆ ಸೇರಿದ ಜಂಜರ್ ನಂಬರ್ 33 ಆಸ್ತಿ ನಂಃ 31 ರ ಅಸೆಸ್‌ಮೆಂಟ್ ರದ್ದುಪಡಿಸಿ ನಮಗೆ ಖಾತೆ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ನಾನು ಬಸವೇಗೌಡರ ಅಸೆಸ್‌ಮೆಂಟ್ ಕಾಪಿ ನೋಡಿದ್ದೇನೆ ಎಂದರೆ ಸರಿ. ಗ್ರಾಮಪಂಚಾಯಿತಿಯವರು ನಮ್ಮ ಅರ್ಜಿ ಪ್ರಕಾರ ಖಾತೆ ಮಾಡಿಕೊಡದಿದ್ದ ಕಾರಣಕ್ಕೆ ತಾಲ್ಲೂಕು ಪಂಚಾಯಿತಿಯಲ್ಲಿ ಅಪೀಲು ಸಲ್ಲಿಸಿದ್ದೆವು ಎಂದರೆ ಸಾಕ್ಷಿಯು ಒಂದು ಬಾರಿ ಅರ್ಜಿ ಕೊಟ್ಟಿದ್ದೆವು ಎಂದು ಹೇಳಿ ಕೂಡಲೇ ಇಲ್ಲವೆಂದು ಹೇಳಿದ್ದಾರೆ. ಪ್ರಶ್ನೆಗೆ ಉತ್ತರಿಸುತ್ತಿರುವಾಗ ಸಾಕ್ಷಿಯು ನೋಟವನ್ನು ಬೇರೆ ಕಡೆ ತಿರುಗಿಸಿ ಅನುಮಾನಿಸುತ್ತಾ ಉತ್ತರಿಸುತ್ತಿರುವುದು ಕೋರ್ಟ್ ಗಮನಿಸಿದೆ. ನಾವು ತಾಲ್ಲೂಕು ಪಂಚಾಯಿತಿಗೆ ಕೊಟ್ಟ ಅರ್ಜಿಯನ್ನು ಈಗಾಗಲೇ ಆ ಜಾಗವನ್ನು ಗ್ರಾಮಠಾಣಾವಾಗಿ ಅಸೆಸ್‌ಮೆಂಟ್ ಇರುವ ಕಾರಣ ವಜಾ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರಣೆಗೆ ನೋಟೀಸ್ ಕೊಟ್ಟು ನನ್ನನ್ನೂ ಕೂಡ ಕರೆದಿದ್ದರು ಎಂದರೆ ಕರೆದಿದ್ದುದು ನಿಜ.

ಅತಿಕ್ರಮಣಮಾಡಿದ್ದಾರೆ ಎನ್ನುವ ಆಸ್ತಿಯ ಉದ್ದ ಮತ್ತು ಅಗಲ ಎಷ್ಟು ಎಂದರೆ ನಮಗೇನು ಗೊತ್ತು? ದಾವಾ ಬಿ ಸ್ವತ್ತು ನನ್ನ ಪ್ರಕಾರ ಅಸೆಸ್‌ಮೆಂಟ್ ಆಸ್ತಿಯೋ ಅಥವಾ ರೆವಿನ್ಯೂ ಜಾಗವೋ ಎಂದರೆ ಸರ್ವೆ ನಂಬರ್‌ಗೆ ಸೇರಿದ ಜಾಗ. ಪ್ರತಿವಾದಿಗಳು ಈಗ ವಾಸ ಮಾಡುತ್ತಿರುವ ಜಾಗವನ್ನು ನಾನು ಸರ್ವೆ ನಂಬರ್ ಎಂದು ಹೇಳುತ್ತಿದ್ದೀನಾ ಎಂದರೆ ಹೌದು. ಅದು ಗ್ರಾಮಠಾಣಾಗೆ ಸೇರಿದ ಆಸ್ತಿ ಸರ್ವೆ ನಂಬರ್ ಅಲ್ಲ ಎಂದರೆ ಸರಿಯಲ್ಲ. ನಿಪಿಃ 6 ರ ಪ್ರಕಾರ ಸರ್ವೆ ಮಾಡುವ ಮುಂಚೆ ಪ್ರತಿವಾದಿಗಳಿಗೆ ನೋಟೀಸ್ ಕೊಟ್ಟಿದ್ದರು ಆದರೆ ನೋಟೀಸಿನ ಕಾಪಿಯನ್ನು ಗ್ರಾಮ ಚಾವಡಿಯಲ್ಲಿ ಅಂಟಿಸಿರಲಿಲ್ಲ. ನಿಪಿಃ 6 ರ ಪ್ರಕಾರ ಒತ್ತುವರಿಯಾಗಿರುವ ಮೂರು ಗುಂಟೆಗೆ ಚೆಕ್ಕು ಬಂದಿಗಳನ್ನು ಹೇಳಿ ಎಂದರೆ ಅದಕ್ಕೆ ಯಾವುದೇ ಚೆಕ್ಕು ಬಂದಿ ಇಲ್ಲ. ಪೂರ್ವಕ್ಕೆ ನಿಂಗಯ್ಯ 2 ಗುಂಟೆಯಲ್ಲಿ ಸ್ವಾಧೀನ ಹೊಂದಿದ್ದಾನೆ. ಸರ್ವೆ ನಂಃ 622ಃ4ಎ ನ ಉತ್ತರ ದಿಕ್ಕಿಗೆ 9 ಅಂಕಣದ ಮನೆ ಇದೆ ಎಂದರೆ ನಾನು ಅಳತೆ ಮಾಡಿಸುವಾಗ ಇರಲಿಲ್ಲ. ಅಳತೆ ಮಾಡಿಸಿದ ನಂತರ ಆ ಮನೆಯನ್ನು ಕಟ್ಟಿದ್ದಾರೆ. ಸಾಕ್ಷಿಗೆ ನೀವು ಯಾವಾಗ ಅಳತೆ ಮಾಡಿಸಿದಿರಿ ಎಂದರೆ ಸಾಕ್ಷಿಯು ಡೇಟ್ ಗೊತ್ತಿಲ್ಲ ದಾಖಲೆಯಲ್ಲಿ ಡೇಟ್ ಇದೆ ನೋಡಿಕೊಳ್ಳಿ ಎನ್ನುತ್ತಾರೆ. ಅರ್ಜಿ ಕೊಟ್ಟ ಮೂರು ತಿಂಗಳಲ್ಲಿ ಅಳತೆ ಮಾಡಿದ್ದರು. ಅರ್ಜಿ ಕೊಟ್ಟ ಮೂರು ತಿಂಗಳಲ್ಲೇ ಎಲ್ಲಾ ಪ್ರತಿವಾದಿಗಳು ಮನೆಗಳನ್ನು ಕಟ್ಟಿದರೇ ಎಂದರೆ ಇಲ್ಲಾ ಚಿಕ್ಕಮ್ಮ ಬಸವರಾಜು, ಪುಟ್ಟಸ್ವಾಮಿ ಮಾತ್ರ ಕಟ್ಟಿದರು. ಇನ್ನು ಎಷ್ಟು ಜನ ಪ್ರತಿವಾದಿಗಳ ಆಸ್ತಿಗಳು ಖಾಲಿ ಉಳಿದಿವೆ ಎಂದರೆ ಅವರು ಒಟ್ಟು ಕುಟುಂಬದಲ್ಲಿ ಇದ್ದಾಗಲೇ ಮನೆ ಕಟ್ಟಿದರು ಮತ್ತು ಅವರೆಲ್ಲರೂ ಒಂದೇ ಮನೆಯಲ್ಲಿ ವಾಸಮಾಡುತ್ತಾರೆ. ನಾನು ಸ್ವಾಧೀನವಿರುವ ಆಸ್ತಿಯ ಉತ್ತರಕ್ಕೆ ಪ್ರತಿವಾದಿಗಳು ಗ್ರಾಮಠಾಣಾದಲ್ಲಿ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದರೂ ಅಲ್ಲಿ ರಸ್ತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 6 ರಲ್ಲಿ ಸರ್ವೆ ನಂಃ 622ಃ4ಬಿ ಇರುವುದನ್ನು ತೋರಿಸಿದ್ದಾರೇ ಎಂದರೆ ಸಾಕ್ಷಿಯು ಅದರಲ್ಲಿ ಬರಬೇಕಾದ ಎರಡು ಗುಂಟೆ ಜಾಗವೇ ಸದರಿ ಸರ್ವೆ ನಂಬರ್ ಎನ್ನುತ್ತಾರೆ. ನಿಪಿಃ 6 ರಲ್ಲಿ ಗುಲಾಬಿ ಬಣ್ಣದಲ್ಲಿ ತೋರಿಸಿದ ಜಾಗವನ್ನು ಬಿಟ್ಟು ಅದರ ದಕ್ಷಿಣ ಅಥವಾ ಪಶ್ಚಿಮ ದಿಕ್ಕುಗಳಲ್ಲಿ ಒತ್ತುವರಿ ಆಗಿದೆ ಎಂದು ಬಣ್ಣದಲ್ಲಿ ತೋರಿಸಿಲ್ಲವೆಂದರೆ ಸರಿ. ನಿಪಿಃ 6 ರಲ್ಲಿ ಎಲ್ಲಿಯೂ ಸರ್ವೆ ನಂಬರ್ 622ಃ4ಎ ನ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿರುವ ಆಸ್ತಿ ಸಂಖ್ಯೆಗಳನ್ನು ನಮೂದುಮಾಡಿಲ್ಲವೆಂದರೆ ಸರಿ. ನಾವು ನಮ್ಮ ಪ್ರಭಾವ ಬಳಸಿ ನಿಪಿಃ 6 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ದಾವೆಯಲ್ಲಿ ಮೂರು ಗುಂಟೆಯನ್ನು ಬಸವೇಗೌಡರು ಒತ್ತುವರಿ ಮಾಡಿದ್ದಾರೆಂದು ತಿಳಿಸಿದ್ದೇವೆ.

ನಾವು ಆ ರೀತಿ ದಾವೆಯಲ್ಲಿ ಬರೆಯಿಸಿಲ್ಲವೆಂದರೆ ಉತ್ತರಿಸಿಲ್ಲ. ನಮ್ಮ ಸರ್ವೆ ನಂಬರ್ 622:4ಎ ನ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಸರ್ವೆ ನಂಬರ್ ಜಮೀನುಗಳಿವೆ ಎಂದರೆ ಸರಿ. ನಮ್ಮ ಜಮೀನಿನ ದಕ್ಷಿಣಕ್ಕೆ ಮಲ್ಲೇಗೌಡರ ಹೆಂಡತಿ ಕಾಡಮ್ಮನ ಜಮೀನು, ಪಶ್ಚಿಮಕ್ಕೆ ನಮ್ಮದೇ ಜಮೀನು ಆದರೆ ಅದರ ಸರ್ವೆ ನಂಬರ್ ಗೊತ್ತಿಲ್ಲ. ಪಶ್ಚಿಮಕ್ಕೆ ಕಾಳಿದೊಡ್ಡೇಗೌಡರ ಜಮೀನು ಇದೆ ಎಂದರೆ ಹೌದು ಅದು ಕೂಡ ನಮ್ಮ ತಂದೆಯ ಜಮೀನು. ಕಾಳಿದೊಡ್ಡೇಗೌಡನ ಜಮೀನು ಕೂಡ ನನ್ನ ತಂದೆಯ ಹೆಸರಿನಲ್ಲಿ ಇದೆ ಎಂಬ ಬಗ್ಗೆ ಆರ್‌ಟಿಸಿ ಹಾಜರುಮಾಡಿದ್ದೀನಾ ಎಂದರೆ ಮಾಡಿಲ್ಲ. ಸದರಿ ಪಶ್ಚಿಮ ದಿಕ್ಕಿನ ಜಮೀನಿನಿಂದ ಉತ್ತರಕ್ಕೆ ಕೂಡ ಗ್ರಾಮಠಾಣಾದ ಮನೆಗಳಿವೆ ಎಂದರೆ ಸರಿ. ತಮ್ಮೇಗೌಡರ ಮನೆಯ ಪೂರ್ವಕ್ಕೆ ಮಾದೇಗೌಡರ ಖಾಲಿ ಜಾಗವಿದೆ ಎಂದರೆ ಸರಿ. ಆ ಖಾಲಿ ಜಾಗದ ಪೂರ್ವಕ್ಕೆ 5ನೇ ಪ್ರತಿವಾದಿ ಚಿಕ್ಕಮ್ಮನ ಮನೆ ಎಂದರೆ ಹೌದು ಅವರೆಲ್ಲರೂ ಅಣ್ಣತಮ್ಮದಿರು. ಚಿಕ್ಕಮ್ಮನ ಮನೆಯ ಪೂರ್ವಕ್ಕೆ ಪ್ರತಿವಾದಿ ಬಸವರಾಜನ ಮನೆ ಎಂದರೆ ಸರಿ.

ಸರ್ವೆ ಮಾಡುವಾಗ ನಿಂಗಯ್ಯನ ಜಮೀನನ್ನು ಅಳತೆ ಮಾಡಿ ಅದರಲ್ಲಿ ಎರಡು ಗುಂಟೆ ಕಳೆದರು. ಅದನ್ನು ಯಾವ ಕಾರಣಕ್ಕೆ ನಿಮ್ಮ ಜಮೀನಿನ ಅಳತೆಯಿಂದ ಕಳೆದರು ಎಂದರೆ ನಿಂಗಯ್ಯ ಎರಡು ಗುಂಟೆ ಕ್ರಯ ಮಾಡಿದ್ದರಿಂದ ಅದು ಆತನಿಗೆ ಸೇರಿರುತ್ತದೆ. ನಾನು ನಿಂಗಯ್ಯನ ಕ್ರಯಪತ್ರವನ್ನು ಹಾಜರುಮಾಡಿಲ್ಲವೆಂದರೆ ಸರಿ. ನಮ್ಮ ಆಸ್ತಿಯ ಉತ್ತರಕ್ಕೆ ನಿಂಗಯ್ಯನಿಗೆ ಆಸ್ತಿ ಇಲ್ಲವೆಂದರೆ ಸರಿಯಲ್ಲ. ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಗಿದೆ.

ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸಾ ಸ ಇ ಎ ಒ

(ಮಧುಸೂಧನ ಡಿ.ಕೆ.)
ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಯಳಂದೂರು.